ಅ) ಈವರೆಗೆ ಶಿವಮೊಗ್ಗ ವಿಶೇಷ ಭೂ ಸ್ವಾಧೀನಾಧಿಕಾರಿಗಳು ವರದಿ ಮಾಡಿದಂತೆ ಹಾಲಿ ಇತ್ಯರ್ಥವಾಗಿರುವ 147 ಪ್ರಕರಣಗಳ ಬಾಬ್ತು ರೂ.80.00 ಲಕ್ಷಗಳಷ್ಟು ಪರಿಹಾರ ಪಾವತಿಸಬೇಕಾಗಿದೆ.

ಇ) ವಿವಿಧ ನ್ಯಾಯಾಲಯಗಳಲ್ಲಿರುವ ಭೂ ಸ್ವಾಧೀನಾತಿ ಪ್ರಕರಣಗಳ ಇತ್ಯರ್ಥಿತ ಹಣವನ್ನು ಕಾಲಕಾಲಕ್ಕೆ ಭೂಸ್ವಾಧೀನಾಧಿಕಾರಿಗಳು ಬಿಡುಗಡೆ ಮಾಡಲು ಅನುವಾಗುವಂತೆ, ನಿಗಮವು ಹಣವನ್ನು ಭೂಸ್ವಾಧೀನಾಧಿಕಾರಿಯ ಕಛೇರಿಯಲ್ಲಿ ಜಮಾ ಮಾಡಲಾಗುತ್ತದೆ ಇದರನ್ವಯ, ಜನವರಿ 98ರ ಮಾಹೆಯಲ್ಲಿ 10.00 ಲಕ್ಷ ರೂ.ಗಳನ್ನು ಮತ್ತು ಏಪ್ರಿಲ್ 98 ರಲ್ಲಿ 5.00 ಲಕ್ಷ ರೂ.ಗಳನ್ನು ಹಾಗೂ ಮೇ 98 ರಲ್ಲಿ 25.00 ಲಕ್ಷ ರೂ.ಗಳನ್ನು ಜಮಾ ಮಾಡಲಾಗಿದೆ. ಭೂಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಈಗ 39.84 ಲಕ್ಷ ರೂ.ಗಳು ಉಳಿದಿರುತ್ತದೆ. ಬಾಕಿ ಪಾವತಿಸಬೇಕಾದ30.00 ಲಕ್ಷ ರೂ.ಗಳನ್ನು ತುರ್ತಾಗಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ವಿದ್ಯುತ್ ವೋಲ್ಟೇಜ್ ತೊಂದರೆ.

1788 - ಶ್ರೀ ಅಪ್ಪಚ್ಚುರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸೋಮವಾರ ಪೇಟೆ ತಾಲ್ಲೂಕಿನ ಕೊಡ್ಲಿಪೇಟೆ ಹೋಬಳಿಯಲ್ಲಿ ವಿದ್ಯುತ್ ವೋಲ್ಟೇಜ್ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;*

ಆ) *ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;*

ಇ) *ಶನಿವಾರ ಸಂತೆಯಲ್ಲಿ 66 ಕೆ.ವಿ. ವಿದ್ಯುತ್ ಕೇಂದ್ರವನ್ನು ಯಾವಾಗ ಆಳವಡಿಸಲಾಗುವುದು?*

ಶ್ರೀ ಶರಣ ಬಸಪ್ಪ ದರ್ಶನಪುರ್ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಮತ್ತು (ಇ) ಕಡಿಮೆ ವೋಲ್ಟೇಜ್ ಪರಿಸ್ಥಿತಿಯನ್ನು ನಿವಾರಿಸುವ ಸಲುವಾಗಿ ಶನಿವಾರ ಸಂತೆಯಲ್ಲಿ ಒಂದು66 ಕೆವಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ರೂಪಿಸಲು ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದೆ. ಈ ಪ್ರಸ್ತಾವನೆಯನ್ನು ಮಂಡಳಿಯ ತಾಂತ್ರಿಕ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾಗುವುದು.

ಕೊಡಗು ಜಿಲ್ಲೆಯಲ್ಲಿ ಹಸಿರು ಮತ್ತು ಕೇಸರಿ ಕಾರ್ಡ್‌ಗಳ ವಿತರಣೆ.

1789 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೊಡಗು ಜಿಲ್ಲೆಯಲ್ಲಿ ಎಷ್ಟು ಜನರಿಗೆ ಹಸಿರು ಮತ್ತು ಕೇಸರಿ ಕಾರ್ಡುಗಳನ್ನು ವಿತರಿಸಲಾಗಿದೆ; ಇನ್ನು ಎಷ್ಟು ಜನರಿಗೆ ಈ ಕಾರ್ಡ್‌ಗಳನ್ನು ವಿವರಿಸಬೇಕಾಗಿದೆ?*

ಅ) ಉಳಿದ ಜನರಿಗೆ ಈ ಕಾರ್ಡುಗಳನ್ನು ಯಾವಾಗ ವಿತರಿಸಲಾಗುವುದು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ದಿನಾಂಕ 1-3-1998ರ ಅಂತ್ಯಕ್ಕೆ ಕೊಡಗು ಜಿಲ್ಲೆಯಲ್ಲಿ 73,290 ಹಸಿರು ಪಡಿತರ ಚೀಟಿಗಳನ್ನು ಹಾಗೂ 30,495 ಕೇಸರಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. 31-12-1997ರ ಅಂತ್ಯಕ್ಕೆ 193 ಅರ್ಜಿಗಳು ಕೇಸರಿ ಕಾರ್ಡುಗಳ ವಿತರಣೆಗಾಗಿ ಬಾಕಿ ಇರುತ್ತದೆ.

ಆ) ಸರ್ಕಾರವು ಸುತ್ತೋಲೆ ಸಂಖ್ಯೆ ಎಫ್‌ಸಿಎಸ್ 20 ಡಿಆರ್‌ಎ 97, ದಿನಾಂಕ 15-4-1998ರ ಮುಖಾಂತರ ಹೊಸ ಪಡಿತರ ಚೀಟಿಗಳನ್ನು ವಿತರಿಸುವ ಬಗ್ಗೆ ಕೆಲವು ವಿಧಾನಗಳನ್ನು ರೂಪಿಸಿ ಆದೇಶವನ್ನು ಹೊರಡಿಸಲಾಗಿದೆ. ಅದರಂತೆ ಬಂದ ಅರ್ಜಿಗಳನ್ನು ಪರಿಶೀಲಿಸಿ ದೃಢೀಕರಿಸಿದ ನಂತರ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ಒಂದು ತಿಂಗಳಲ್ಲಿ ವಿತರಿಸಲಾಗುವುದು.

ಬಳ್ಳಾರಿ ಜಿಲ್ಲೆಯಲ್ಲಿ ಅಗ್ನಿಶಾಮಕ ಕೇಂದ್ರಗಳು

1792 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಕಾರಾಗೃಹ ಪೌರರಕ್ಷಣೆ, ಸೈನಿಕ ಕಲ್ಯಾಣ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಅಗ್ನಿಶಾಮಕ ಕೇಂದ್ರಗಳೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) 1997-98ರಲ್ಲಿ ಎಲ್ಲೆಲ್ಲಿ ಹೊಸದಾಗಿ ಅಗ್ನಿಶಾಮಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ?

ಇ) 1998-99ರಲ್ಲಿ ಎಲ್ಲೆಲ್ಲಿ ಹೊಸದಾಗಿ ಅಗ್ನಿಶಾಮಕ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹರಕ್ಷಕದಳ, ಬಂಧೀಖಾನೆ, ಸೈನಿಕ ಕಲ್ಯಾಣ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು) :

ಅ) ಬಳ್ಳಾರಿ ಜಿಲ್ಲೆಯಲ್ಲಿ ಹಾಲಿ 6 ಅಗ್ನಿ ಶಾಮಕ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ವಿವರಗಳು ಈ ಕೆಳಕಂಡಂತಿವೆ.

1) ಬಳ್ಳಾರಿ 2) ಹೊಸಪೇಟೆ 3) ಸಂಡೂರು 4) ಕೂಡ್ಲಿಗಿ
5) ಹೂವಿನ ಹಡಗಲಿ 6) ಶಿರಗುಪ್ಪ

ಆ) 1997-98 ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಯಾವುದೇ ಹೊಸ ಅಗ್ನಿ ಶಾಮಕ ಠಾಣೆಯನ್ನು ಪ್ರಾರಂಭಿಸುವುದಿಲ್ಲ.

ಇ) ಕುರುಗೋಡು ಮತ್ತು ಹಗರಿಬೊಮ್ಮನಹಳ್ಳಿಗಳಲ್ಲಿ ಸರ್ಕಾರವು ಹೊಸ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಿ ಆದೇಶಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಿ ಆದೇಶಗಳನ್ನು ಹೊರಡಿಸಲಾಗಿದೆ. ಮೂಲಭೂತ ಸೌಲಭ್ಯಗಳಾದ ನಿವೇಶನ ಅಥವಾ ಕಟ್ಟಡಗಳು ಲಭ್ಯವಿದ್ದರೆ ಈ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.